5

# ಬಲವಾದ, ಸಂತೋಷವಾದ, ಕ್ರೈಸ್ತ ಕುಟುಂಬಗಳ ಕಟ್ಟುವಿಕೆ

ವಾಕ್ಯಭಾಗ: ಕೀರ್ತನೆಗಳು 127.

ಯೆಹೋವನು ಮನೇ ಕಟ್ಟದಿದ್ದರೆ
ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ;
ಯೆಹೋವನು ಪಟ್ಟಣವನ್ನು ಕಾಯದಿದ್ದರೆ
ಕಾವಲುಗಾರರು ಅದನ್ನು ಕಾಯುವದು ವ್ಯರ್ಥ.
ಬೆಳಗಾಗುವದಕ್ಕಿಂತ ಮುಂಚೆ ಏಳುವವರೇ, ಹೊತ್ತು
    ಮೀರಿ ಮಲಗುವವರೇ,
ನೀವು ಆಹಾರಕ್ಕಾಗಿ ಇಷ್ಟು ಕಷ್ಟಪಡುವದು ವ್ಯರ್ಥ;
ಆತನು ಅದನು ತನ್ನ ಪ್ರಿಯರಿಗೆ ನಿದ್ರೆಯಲ್ಲಿಯೂ
    ಕೊಡುತ್ತಾನೆ.
ಪುತ್ರಸಂತಾನವು ಯೆಹೋವನಿಂದ ಬಂದ ಸ್ವಾಸ್ತ್ಯವು;
ಗರ್ಭಫಲವು ಆತನ ಬಹುಮಾನವೇ
ಯೌವನದಲ್ಲಿ ಹುಟ್ಟಿದ ಮಕ್ಕಳು
ಯುದ್ಧವೀರನ ಕೈಯಲ್ಲಿರುವ ಅಂಬುಗಳಂತಿದ್ದಾರೆ;
ಇವುಗಳಿಂದ ತನ್ನ ಬತ್ತಳಿಕೆಯನ್ನು ತುಂಬಿದವನು
    ಧನ್ಯನು.
ಊರುಬಾಗಲಲ್ಲಿ ವೈರಿಗಳ ಸಂಗಡ ವ್ಯಾಜ್ಯವಾಡು
    ವಾಗ
ಅಂಥವರು ಅಪಮಾನಹೊಂದುವದಿಲ್ಲ (ಕೀರ್ತನೆಗಳು 127).

ಯೆಹೂದ್ಯ ಪ್ರವಾಸಿಗಳು ಯೆರೂಸಲೇಮನ್ನು ಪ್ರವೇಶಿಸುವಾಗ ಕೀರ್ತನೆ 127ನ್ನು "ದಿಣ್ಣೆಯನ್ನು ಏರುವಾಗ" ಉಪಯೋಗಿಸುತ್ತಿದ್ದರು. ಮುಖ್ಯವಾಗಿ ದೇವಾಲಯದ ಬಳಿ ಬರುವಾಗ ಈ ಕೀರ್ತನೆಯನ್ನು ಉಪಯೋಗಿಸುತ್ತಿದ್ದರು. "ಮನೆ" ಅಥವಾ ಪಟ್ಟಣ ಎಂಬ ವಿಷಯ ಬಂದಾಗ ಇದನ್ನು ಉಪಯೋಗಿಸುತ್ತಿದ್ದರು: ಇದರ ಒಳಾರ್ಥ "ಮನೆ" ಅಂದರೆ ದೇವಾಲಯ ಮತ್ತು "ಪಟ್ಟಣ" ಅದು ಯೆರೂಸಲೇಮ್ ಪಟ್ಟಣದ ಕುರಿತಾಗಿತ್ತು. ಅದು ಕಲ್ಲುಗಳಿಂದಾಗಲಿ, ಇಟ್ಟಿಗೆಗಳಿಂದಾಗಲೀ, ಅಥವಾ ಅದರ ನೋಟದಿಂದಾಗಲಿ ಗುರುತಿಸಲ್ಪಡುತ್ತಿರಲಿಲ್ಲ - ಅದು ಯೆಹೋವನಿಂದಲೇ ಗುರುತಿಸಲ್ಪಟ್ಟಿರುವದರಿಂದ ಯೆರೂಸಲೇಮು ಬಲವಾದ ಪಟ್ಟಣವಾಗಿತ್ತು.

ಹೇಗೂ, "ಮನೆ" ಎಂಬ ಪದ, ಇನ್ನೂ ವಿಸ್ತಾರವಾದ ಗುರುತನ್ನು ಪಡೆದಿತ್ತು. ಮೂಲ ಪಾಠದಲ್ಲಿ "ಮನೆ"ಯ ಕುರಿತು ನಿರ್ದಿಷ್ಟವಾದ ಬರಹಗಳು ಇರುವದಿಲ್ಲ. ಆದರೆ ಮೂಲ ಬರಹದಲ್ಲಿ ವಚನವು ತಿಳಿಸುತ್ತದೆ, "ಯೆಹೋವನು ಮನೆ ಕಟ್ಟದಿದ್ದರೆ" *ಯಾವುದೇ* ಮನೆ ಎಂಬುದಾಗಿ ಈ ಕೀರ್ತನೆಯಲ್ಲಿ ಮನೆಯ ವಿಷಯವೇ ಮುಖ್ಯ ಪ್ರಸ್ತಾಪವಾಗಿದ್ದರೂ: "ಪುತ್ರ

ಸಂತಾನವು ಯೆಹೋವನಿಂದ ಬಂದ ಸ್ವಾಸ್ತ್ಯವು; ಗರ್ಭಫಲವು ಆತನ ಬಹುಮಾನವು" ಕೀರ್ತನೆಯ ಆರಂಭದಲ್ಲಿಯೇ ಕುಟುಂಬದ ಹೇಳಿಕೆಯು ತಿಳಿಸಲ್ಪಟ್ಟಿದೆ: ಯೆಹೋವನು *ಮನೆ,* ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ; ದೇವರು *ಕುಟುಂಬವನ್ನು* ಕಟ್ಟದೆ ಹೋದರೆ ಅದನ್ನು ಕಟ್ಟುವ ಪ್ರಯತ್ನ ವ್ಯರ್ಥ "ಕರ್ತನು" ಮತ್ತು "ಕುಟುಂಬ"; ಈ ಪದಗಳನ್ನು ನೆನಪಿನಲ್ಲಿಡಿ. ನಮ್ಮ ಪ್ರಬೋಧನೆಯಲ್ಲಿ ಈ ಎರಡು ಪದಗಳನ್ನು ಪುನಃ ಪುನಃ ಉಪಯೋಗಿಸುತ್ತೇವೆ.

ಮದುವೆ ಮತ್ತು ಮನೆಯ ಕುರಿತು ಮುಂದುವರಿಸುವಾಗ, ಕುಟುಂಬದಲ್ಲಿ ಇರಬೇಕಾದ ಸಂಬಂಧಗಳ ಕುರಿತು ನೋಡೋಣ. ಆದರೆ ಈಗ, ತಂದೆ ತಾಯಿಗಳ ಕುರಿತಾಗಿ ನೋಡೋಣ.

ಈ ಅಧ್ಯಾಯನವು "ಬಲವಾದ ಸಂತೋಷವುಳ್ಳ, ಕ್ರೈಸ್ತಕುಟುಂಬಗಳನ್ನು ಕಟ್ಟುವ ವಿಷಯದಲ್ಲಿ ಇರುವಂಥದ್ದಾಗಿದೆ."[1] ಅನೇಕರು ಈ ವಿಧವಾದ ಕುಟುಂಬವನ್ನು ಇಷ್ಟಪಡುವಂಥವರಾಗಿದ್ದಾರೆ. ಫಾರ್‌ಚೂನ್ 500ನ[2] ಹಿರಿಯ ಪದವಿಧರರು, ಮುಖ್ಯ ಅಧಿಕಾರಿಗಳು ನಿಯತಕಾಲಿಕ ಪತ್ರಿಕೆಯ ಒದುಗರು ಇವರಲ್ಲಿ ವಿವಾಹ ವಿಚ್ಛೇದನದ ಕುರಿತಾದ ಸಮೀಕ್ಷೆಯನ್ನು ನಡೆಸಿದಾಗ ಅವರಲ್ಲಿ ಬಲವಾದ ಸಂಬಂಧಗಳುಳ್ಳ ಕುಟುಂಬದ ಆಶೆಯನ್ನು ಅನೇಕರು ವ್ಯಕ್ತಪಡಿಸಿದರು. ಇದು ಅವರ ಮೊದಲ ಆಸೆಯಾಗಿತ್ತು.

ರಾಯ್ಸೀ ಮೋನಿ[3] ಸ್ಪ್ರಿಂಗ್‌ಫೀಲ್ಡ್ ಮಿಸೌರಿಯಲ್ಲಿದ್ದಂಥ, ಒಂದು ನಾಗರಿಕ ಗುಂಪಿನೊಂದಿಗೆ ಮಾತನಾಡುತ್ತಿದ್ದರು. ಅವರು ಸೂಚನೆಯ ಪತ್ರವನ್ನು ವಿತರಿಸಿ ಅದರಲ್ಲಿ ಅವರುಗಳು ಹೆಚ್ಚಾಗಿ ಗೌರವಿಸುವಂಥ ಐದು ವಿಷಯಗಳನ್ನು ಬರೆದು ಸೂಚಿಸಲು ಸಲಹೆ ನೀಡಿದರು. ಅದರಲ್ಲಿ ಅವರು ಜನರನ್ನೂ, ಕೆಲಸಗಳನ್ನೂ ಮತ್ತು ಉದ್ದೇಶಗಳನ್ನೂ ಸಹ ಸೇರಿಸಬಹುದಿತ್ತು. ಈ ಒಂದು ತಿಳುವಳಿಕೆಯನ್ನು ನೀಡಲು ಅವರು ಕಷ್ಟಪಡುತ್ತಿರುವಾಗ, ಅವರು ಹೇಳಿದರು, "ನಿಮಗಾಗಿ ಒಂದು ಕೆಟ್ಟ ಸುದ್ದಿಯು ನನ್ನ ಬಳಿ ಇದೆ: ನೀವು ಒಂದು ಅಂಶವನ್ನು ಗುರುತು ಮಾಡುವ ಮೂಲಕ ಪ್ರಾರಂಭಿಸಿ" ಅಲ್ಲಿದ್ದಂಥ ಗುಂಪು ತಳಮಳಗೊಂಡರು. ಮೋನಿಯವರು ಮುಂದಿನ ವಿಷಯವನ್ನು ಗುರುತಿಸಲು ಸೂಚಿಸಿದರು. ಒಂದಾದ ನಂತರ ಇನ್ನೊಂದು ಗುರುತಿಸಲು ಹೇಳಿದರು; ಈಗಾಗಲೇ ಅವರ ಕಳವಳವು ಕಡಿಮೆಯಾಗುತ್ತಾ ಅವರು ಗುರುತಿಸುವಂಥ ಕಾರ್ಯವು ಗಂಭೀರವಾದ ವ್ಯವಹಾರಕ್ಕೆ ತಿರುಗಿತು. ಕೊನೆಯದಾಗಿ, ಅಲ್ಲಿ ಎರಡು ಅಂಶಗಳನ್ನು ಮಾತ್ರ ಗುರುತುಮಾಡಬೇಕಿತ್ತು. ನಂತರ ಮೋನಿ ಹೇಳಿದರು, "ಇನ್ನೊಂದನ್ನು ಗುರುತುಮಾಡಿ ಎಂದು ಹೇಳುವ ಸಣ್ಣ ಸ್ವಭಾವಕ್ಕೆ ನಾನು ಹೋಗುವದಿಲ್ಲ ಅಂದರು." ನಂತರ ಅಲ್ಲಿ ನೆರೆದಿದ್ದವರಿಗೆ, "ನಿಮ್ಮ ಸೂಚನೆ ಪತ್ರದಲ್ಲಿ ಕುಟುಂಬಕ್ಕೆ *ಸಂಬಂಧ* ಪಟ್ಟ ವಿಷಯಗಳನ್ನು ಎಷ್ಟು ಜನರು ಬರೆದಿರುವಿರಿ?" ಬಹಳಷ್ಟು ಕೈಗಳು ಮೇಲಕ್ಕೆ ಎತ್ತಲ್ಪಟ್ಟವು. "ದೇವರೊಂದಿಗಿನ ಸಂಬಂಧದ ಕುರಿತು ಎಷ್ಟು ಜನರು ಸೂಚಿಸಿರುವಿರಿ?" ಈಗ ಪ್ರತಿಯೊಂದು ಕೈಗಳು ಎತ್ತಲ್ಪಟ್ಟಿದ್ದವು. ದೇವರ ಮತ್ತು ಕುಟುಂಬದ ವಿಷಯಗಳ ಹೊರತು ಪಡಿಸಿ ಇನ್ನುಳಿದ ಹವ್ಯಾಸ, ರಾಜಕೀಯ ಸ್ವಾತಂತ್ರ್ಯ ಇತರೆ ಸಂಗತಿಗಳು ಎರಡನೆಯ ಸ್ಥಾನದಲ್ಲಿ ಉಳಿದಿದ್ದವು. ಮೋನಿಯವರ ಬಳಿಯಲ್ಲಿ ಬೇರೆ ಪ್ರಶ್ನೆಗಳಿರಲಿಲ್ಲ: "ಈ ಆದ್ಯತೆಗಳ ಬಗ್ಗೆ ಎಷ್ಟು ಸಮಯವನ್ನು ನೀವು ಕಳೆದಿರುವಿರಿ?" ಅಲ್ಲಿದ್ಧಂತ ಜನರ ಮುಖ್ಯಭಾವವೇ ಅವರ ಪ್ರಶ್ನೆಗೆ ಉತ್ತರವನ್ನು ಹೇಳುತ್ತಿದ್ದವು.

ಈ ಪಾಠಗಳಲ್ಲಿ, ನಾವುಗಳು ಕುಟುಂಬ ಹಾಗೂ ದೇವರ ಕುರಿತಾಗಿ ಮಾತನಾಡುತ್ತಿದ್ದೇವೆ. ನಾವು ಸಕಾರತ್ಮಕವಾಗಿ ಮುಂದುವರಿಯೋಣ: "ಬಲವಾದ, ಸಂತೋಷಕರವಾದ ಕ್ರೈಸ್ತ ಕುಟುಂಬದ ಕಟ್ಟುವಿಕೆ." ಕುಟುಂಬಗಳಲ್ಲಿ ಇರುವ ತಪ್ಪುಗಳನ್ನು ಕಂಡು ಹಿಡಿಯುವದಕ್ಕೆ ನಾವು ಕಷ್ಟಪಡುವ ಅವಶ್ಯವಿಲ್ಲ. ವಿಚ್ಛೇದನದ ಕುರಿತು ಮೊಡಕವಿದಂತಹ ವಾಲ್‌ವಾರುಣುದ ಲೆಕ್ಕಾಚಾರವನ್ನು ನೀಡಬಹುದು. ಅಪನಂಬಿಗಸ್ತಿಗೆಯ ಕುರಿತು ಮಕ್ಕಳನ್ನು ಹಿಂಸೆಪಡಿಸುವ

ಕುರಿತು, ಮತ್ತು ಕುಟುಂಬದ ಕಲಹದ[4] ಕುರಿತು ಲೆಕ್ಕಾಚಾರಗಳನ್ನು ನೀಡುತ್ತೇವೆ. ಆದರೆ ಕುಟುಂಬದ ಒಳ್ಳೆಯ ಅಂಶಗಳ ಕಡೆಗೆ ನೋಡೋಣ. ಸಂತೋಷ ಮಯವಾದ ಕುಟುಂಬಗಳು ಸಹ ಇರುತ್ತವೆ - ಬಲವಾದ ಕುಟುಂಬಗಳಿವೆ, ಕ್ರೈಸ್ತ ಕುಟುಂಬಗಳಿವೆ. ಈಗ ನಾವು ಕೇಳುವಂತ ಪ್ರಶ್ನೆ "ಯಾವ ಸಂಗತಿಗಳು ಕುಟುಂಬಗಳನ್ನು ಈ ರೀತಿಯಾಗಿ ಪರಿವರ್ತಿಸುತ್ತವೆ?" ಅವರು *ದೇವರು* ಬಯಸಿದನ್ನೆ ಮಾಡುವವರಾಗಿದ್ದಾರೆ ಎಂಬುದೇ ಸಹಜವಾದ ಉತ್ತರ ವಾಗಿದೆ.

ಇದು ಹೆಚ್ಚು ಸ್ಪಷ್ಟವಾಗಿರುವದಿಲ್ಲ. ಯಾವುದೇ ವಸ್ತುವನ್ನು ಹಿಡಿದು ಕೊಳ್ಳಲು ಒಂದು "ಹಿಡಿಯ" ಅವಶ್ಯವಿರುತ್ತದೆ. ನಿಕ್ ಸ್ಟಿನ್ನೆಥ್‌ರವರು ಕಂಡುಹಿಡಿದಿರುವ ಆರು ಸಂಗತಿಗಳನ್ನು ನಾವು ಹಿಡಿದುಕೊಳ್ಳೋಣ.

ಹಲವಾರು ವರ್ಷಗಳ ಹಿಂದೆ, ಓಕ್ಲಹೋಮದಲ್ಲಿ ಕುಟುಂಬದ ಅಧ್ಯಾಯನದ ವಿಷಯದಲ್ಲಿ ಪ್ರಾಧ್ಯಾಪಕರಾಗಿದ್ದ ಡಾಕ್ಟರ್ ಸ್ಟಿನ್ನೆಥ್‌ರವರು ಬಲವಾದ ಕುಟುಂಬಗಳ ವಿಷಯದಲ್ಲಿ ಆಸಕ್ತಿ ತಳೆದರು. ಆ ದಿವಸಗಳಲ್ಲಿ ಕೆಲವರು ಕುಟುಂಬಗಳಲ್ಲಿ ಇರುವ ತಪ್ಪುಗಳ ಕುರಿತಾದ ಅಧ್ಯಯನಗಳನ್ನು ಮಾಡುತ್ತಿದ್ದರು. ಆದರೆ ಸ್ಟಿನ್ನೆಥ್‌ರವರು *ಬಲವಾಗಿರುವ* ಕುಟುಂಬಗಳ ಬಗ್ಗೆ ಅಧ್ಯಾಯನವನ್ನು ಮಾಡಿದರು. ಇದರಲ್ಲಿ ಅರ್ಹತೆಯನ್ನು ಗಳಿಸ ಬೇಕಾಗಿದ್ದರೆ. ಅವರ ಕುಟುಂಬದ ಜೀವಿತ ಅತ್ಯುತ್ತಮ ಮಟ್ಟದ, ಸಂತೋಷದ, ಮಾದರಿಯ, ಕುಟುಂಬವಾಗಿ ತೋರ್ಪಡಿಸಿಕೊಳ್ಳಬೇಕಿತ್ತು. ಮತ್ತು ಮಕ್ಕಳನ್ನು ತೃಪ್ತಿ ಪಡಿಸುವ ಉನ್ನತ ಮಟ್ಟದ ತಂದೆ ತಾಯಿಗಳಾಗಿರಬೇಕಿತ್ತು. ಪರಸ್ಪರ ಅವಶ್ಯ ಕಥೆಗಳನ್ನು ಉನ್ನತ ಮಟ್ಟದಲ್ಲಿ ಪೂರೈಸುವವರಾಗಬೇಕಿತ್ತು.

ಅನೇಕ ಕುಟುಂಬಗಳನ್ನು ಸಂದರ್ಶನ ಮಾಡಲಾಯಿತು. ಅದರ ಫಲಿತಾಂಶವನ್ನು ಪರಿಶೀಲಿಸಿ ಪ್ರಕಟ ಮಾಡಿದಾಗ, ಆ ಕುಟುಂಬಗಳಲ್ಲಿ ಇದ್ದ ಅತಿ ಉನ್ನತವಾದ ಆರು ವಿಷಯಗಳನ್ನು ಪ್ರತ್ಯೇಕಿಸಲಾಯಿತು:

(1) ಪರಸ್ಪರ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದರು.

(2) ಜೀವನ ಸಂಗಾತಿಗಳೊಂದಿಗೆ ಉತ್ತಮವಾದ ಸಂಭಾಷಣೆಯ ಸಂಪರ್ಕವಿತ್ತು.

(3) ಕುಟುಂಬದಲ್ಲಿ ಒಟ್ಟಾಗಿ ಸಮಯವನ್ನು ಕಳೆದಿದ್ದರು.

(4) ಕುಟುಂಬದ ಸದಸ್ಯರೆಲ್ಲರೂ ಕುಟುಂಬದ ವಿಷಯಗಳಿಗೆ ಒಪ್ಪಿಸಿ ಕೊಟ್ಟಿದ್ದರು.

(5) ಉನ್ನತವಾದ ಧಾರ್ಮಿಕ ಆಸಕ್ತಿಯನ್ನು ತಳೆದಿದ್ದರು.

(6) ಕುಟುಂಬದ ಸಕಲ ಸಮಸ್ಯೆಯನ್ನು ಸಕಾರಾತ್ಮಕವಾಗಿ ಪರಿಹರಿಸುವ ಯೋಗ್ಯತೆಯನ್ನು ಹೊಂದಿದ್ದರು.

ಬೈಬಲಿನ ಈ ಕಥೆಯು ಅಂತ್ಯದಲ್ಲಿ. ಡಾ. ಸ್ಟಿನ್ನೆಥ್ ಮತ್ತು ಸಂದರ್ಶನ ನಡಿಸುತ್ತಿದ್ದ ಇನ್ನಿತರು ಗಮನಿಸಿದ್ದೇನೆಂದರೆ ಬೈಬಲಿನಲ್ಲಿ ಈ ವಿಷಯದ ಕುರಿತು ತುಲನೆ ಮಾಡು ವಾಗ ಕೀರ್ತನೆಗಾರನು ಹೇಳಿದ ವಿಷಯವು ನಮಗೆ ಆಶ್ಚರ್ಯ ಉಂಟು ಮಾಡಲಿಲ್ಲ? "*ಯೆಹೋವನು* ಮನೆ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ."

ಕುಟುಂಬ ಜೀವಿತದ ಸರ್ವತೋಮುಖವಾದ ವಿಷಯಗಳಿಗೆ, ಬೈಬಲ್ ಉತ್ತರವನ್ನು ನೀಡುತ್ತದೆ - ಇದರೊಂದಿಗೆ ವಯಕ್ತಿಕ ಸಂಬಂಧಗಳು ಸೇರಿರುತ್ತವೆ. ನಿನಗೆ ಉನ್ನತವಾದ ಮದುವೆಯು ಬೇಕಾಗಿದ್ದರೆ, ಬೈಬಲ್‌ಗೆ ಹೋಗು ಉನ್ನತವಾದ ಸ್ನೇಹ ಕ್ಕಾಗಿ ಬೈಬಲಿಗೆ ಹಿಂದಿರುಗು. "ನೀವು ಮನ ಬಂದಂತೆ ಹೊಸ ಒಡಂಬಡಿಕೆಯನ್ನು ತೆರೆ ಯುವುದಾದರು, ನೀವು ನೋಡುವಂಥ ಯಾವುದೇ ವಾಕ್ಯವು ಇತರರೊಂದಿಗೆ[5] ಹೇಗೆ ವರ್ತಿಸಬೇಕೆಂದು ಹೇಳಲಾಗಿದೆ." ಯೋಹಾನನು ತಿಳಿಸಿದಂತೆ, ನಾವು ಸಹೋದರತ್ವದಲ್ಲಿ ಇರದೆ ಹೋದರೆ, ದೇವರನ್ನು ಪ್ರೀತಿಸುವದು ಅಸಾಧ್ಯ (ಯೋಹಾನ 4:20, 21). ನಾವು ಜನರಿಂದ ಏನನ್ನು ಬಯಸುತ್ತೇವೋ ನಾವು ಅದನ್ನೇ ಜನರಿಗೆ ಮಾಡ ಬೇಕೆಂದು

ಯೇಸು ಪ್ರಸಂಗಿಸಿದ್ದಾನೆ (ಮತ್ತಾಯ 7:12).[6] ಕರುಣೆ ತೋರಿಸದೆ ಇರುವವನಿಗೆ ನ್ಯಾಯ ತೀರ್ಮಾನದಲ್ಲಿ ಕರುಣೆಯು ತೋರಿಸಲ್ಪಡುವದಿಲ್ಲ. "ಕರುಣೆಯು ನ್ಯಾಯತೀರ್ಮಾನವನ್ನು ಗೆದ್ದು ಹಿಗ್ಗುತ್ತದೆ" (ಯಾಕೋಬ 2:13; KJV)!

ಸಂತೋಷಕರವಾದ, ಬಲವುಳ್ಳ ಕ್ರೈಸ್ತ ಕುಟುಂಬಗಳನ್ನು ಕಟ್ಟುವದಕ್ಕೆ ವಿವಿಧ ವಾದ ಬೈಬಲಿನ ನಿಯಮಗಳನ್ನು ಉಪಯೋಗಿಸಲು ಅನುಸಂಧಾನ ಮಾಡಬಹುದು - ಪ್ರತಿ ಅನುಸಂಧಾನವು ಬೆಲೆಯುಳ್ಳದ್ದಾಗಿರುತ್ತದೆ. ಈ ಅನುಸಂಧಾನಕ್ಕಾಗಿ ಈಗಾಗಲೇ ತಿಳಿಸಿರುವ ಆರು ಗುಣಗಳನ್ನು ಬೈಬಲಿನಿಂದ ಪರೀಕ್ಷಿಸಿಕೊಳೋಣ. ಪ್ರತಿಯೊಂದು ಗುಣಗಳನ್ನು ಮುಟ್ಟುವದರ ಮೂಲಕ, ನಮಗೆ ಇಷ್ಟವಿರುವ ಕುಟುಂಬಗಳನ್ನು ಕಟ್ಟುವದಕ್ಕೆ ಆಲೋಚನೆಯನ್ನು ಮಾತ್ರ ನೀಡಬಹುದು. ಆದರೆ *ದೇವರೆ* ಆ ರೀತಿಯ ಕುಟುಂಬವನ್ನು ನಿರ್ಮಾಣಮಾಡಲಿ ಎಂದು ದೇವರ ವಾಕ್ಯದ ಸಲಹೆಯ ಮೇರೆಗೆ ಒಪ್ಪಿಸಿಕೊಡಬೇಕು.[7]

## ಪರಸ್ಪರ ಮೆಚ್ಚುಗೆ

ಬಲವಾದ ಕುಟುಂಬಕ್ಕೆ ಇರಬೇಕಾದ ಮೊದಲನೆಯ ಸದ್ಗುಣ, ಈ ವಾಕ್ಯಗಳಲ್ಲಿ ತಿಳಿಸಲಾಗಿದೆ: "ಬಲವಾದ ಕುಟುಂಬಗಳು ಪರಸ್ಪರವಾಗಿ ಮೆಚ್ಚಿಸುವಂಥ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಅವರು ಮಾನಸಿಕವಾಗಿ ಒಬ್ಬರನ್ನೊಬ್ಬರು ಕಟ್ಟುತ್ತಾರೆ ಮತ್ತು ಇತರ ಸದಸ್ಯರನ್ನು ಸಂತೋಷವಾಗಿ ಇಡುತ್ತಾರೆ."[8]

ಕುಟುಂಬಗಳಿಗೆ ಈ ವಿಧವಾದ ಸಂಭಾಷಣೆಯ ಸಂಪರ್ಕ ಬಹು ಪ್ರಾಮುಖ್ಯವಾದದ್ದು. ಸಾಮಾನ್ಯವಾದ ಜೀವಿತಕ್ಕೆ ಮಾತಿನ ವ್ಯವಹಾರ ಅತಿ ಅವಶ್ಯ. ನಾವೆಲ್ಲರು ಮೆಚ್ಚುಗೆಯನ್ನು ಇಷ್ಟಪಡುವವರಾಗಿರುತ್ತೇವೆ. ಕೆಲವು ನಕಾರಾತ್ಮಕವಾದ ವಿಷಯಗಳು ಸಹ ಜೀವನದ ಒಂದು ಭಾಗವಾಗಿರುತ್ತವೆ, ಸ್ವಲ್ಪ ನಕಾರಾತ್ಮಕ ವಿಷಯಗಳು ಬಹಳಷ್ಟು ದಿವಸ ಜೀವನದಲ್ಲಿ ಮುಂದುವರಿಯುತ್ತಿರುತ್ತದೆ. ಕುಟುಂಬದ ಅಂತರಂಗದ ಸಂಬಂಧಗಳ ವಿಷಯಗಳಲ್ಲಿ ಸಂಭಾಷಣೆಯ ಸಂಪರ್ಕ ಅತಿ ಪ್ರಾಮುಖ್ಯವಾಗಿರುತ್ತದೆ. ನಮ್ಮ ಕುಟುಂಬದಿಂದ ಹೊರಗೆ ಇರುವವರು ನಮ್ಮನ್ನು ಮೆಚ್ಚಿಗೆ ಪಡಿಸದೆ ಟೀಕೆಯನ್ನು ಸಹ ಮಾಡಬಹುದು; ಆದರೆ ಈ ವಿಷಯಗಳನ್ನು ನಮ್ಮ ಕುಟುಂಬದವರೇ ಮಾಡುವದಾದರೆ ಅದು ನಮಗೆ ನಾಶನಕರವಾಗಿರುತ್ತದೆ.

ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಕುಟುಂಬಗಳನ್ನು ಕಟ್ಟುವ ವಿಷಯದಲ್ಲಿ ಬೈಬಲ್ ಏನನ್ನಾದರು ಹೇಳುತ್ತದೆಯೇ? ಹೌದು ತಿಳಿಸುತ್ತದೆ ಎಂದು ನೀವು ತಿಳಿದಿರುವಿರಿ. ನಮ್ಮ ಹಿಂದಿನ ಅಧ್ಯಾಯನದಲ್ಲಿ ಎಫೆಸ 4:29ನ್ನು ಉಪಯೋಗಿಸಿದ್ದೇವೆ: "ನಿಮ್ಮ ಬಾಯೊಳಗಿಂದ ಯಾವ ಕೆಟ್ಟಮಾತು ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಆಡಿರಿ" ನಮ್ಮ ಮನಸ್ಸಿಗೆ ನೆನಪಾಗುವ ಇನ್ನೊಂದು ವಚನ 1 ಥೆಸಲೋನಿಕ 5:11: "ಆದದರಿಂದ ನೀವು ಈಗ ಮಾಡುತ್ತಿರುವ ಪ್ರಕಾರವೇ ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ ಭಕ್ತಿಯನೊಬ್ಬರು ವೃದ್ಧಿ ಪಡಿಸುತ್ತಾ ಇರ್ರಿ." ಮೆಚ್ಚುಗೆಯನ್ನು ವ್ಯಕ್ತ ಪಡಿಸಲಾರದ ಅಂಶವನ್ನು ಧ್ಯಾನಿಸುವಾಗ ಯೇಸು ಕೇಳಿದ ಪ್ರಶ್ನೆಯ ಕಡೆಗೆ ನೋಡೋಣ ಲೂಕ 17: "ಹತ್ತುಮಂದಿ ಶುದ್ಧರಾದರಲ್ಲವೇ? ಮಿಕ್ಕ ಒಂಬತ್ತು ಮಂದಿ ಎಲ್ಲಿ?" ನಮ್ಮ ಕುಟುಂಬದಲ್ಲಿ ಅನೇಕರು ಕುಟುಂಬಕ್ಕಾಗಿ ಕೃತಜ್ಞರಾಗಿರುತ್ತೇವೆ, ಮತ್ತು ಹೇಗೂ ಆಶೀರ್ವಾದ ದೊರಕಿದೆ ಎಂದು ನಿರ್ಲಕ್ಷರಾಗಿರುತ್ತೇವೆ.

"ಅಂದರೆ ನಮ್ಮ ಮನೆಗಳಲ್ಲಿ ನಕಾರಾತ್ಮಕವಾದ ಸಂಗತಿಗಳು ಇರಲೇ ಬಾರದು ಎಂದು ಹೇಳುತ್ತಿರುವಿರೋ?" ಎಂದು ಯಾರಾದರು ಕೇಳಬಹುದು, ಇಲ್ಲ, ಆ ರೀತಿ ಇರುವುದಾದರೆ, ಅದು ಸಕಾರಣವಲ್ಲ, ಅದು ನಿಜವಲ್ಲ, ಮತ್ತು ಅದು ವಾಕ್ಯಕ್ಕೆ ಅನುಗುಣವಾಗಿಯೂ ಇರುವದಿಲ್ಲ; ಆದರೆ ಅದನ್ನು ಸಮತೋಲನದಲ್ಲಿ ಇಟ್ಟುಕೊಳ್ಳ ಬಹುದು. ಭಾಷಾ ಸಂಪರ್ಕದ ತಜ್ಞರು

ಹೇಳುವದೇನೆಂದರೆ ಭಾಷಾಸಂಪರ್ಕವು ಶೇಖಡ 80% ರಷ್ಟ ಸಕಾರತ್ಮಕವಾಗಿರಬೇಕು.[9] ಈ ವಿಷಯದ ಕುರಿತು ಪೌಲನು ತಿಳಿಸಿರುವ ಪಾಠವನ್ನು ಕಲಿಯೋಣ. "ನಿಯಮದಂತೆ ಇದನ್ನು ರೊಟ್ಟಿಯ ಎರಡು ತುಂಡುಗಳ ನಡುವೆ" ಇರುವ ಪಧಾರ್ಥದಂತೆ ವಿವರಿಸಿದ್ದಾನೆ: ಅವನು ಒಂದು ಪತ್ರಿಕೆಯನ್ನು ಸಕಾರಾತ್ಮಕವಾಗಿ ಪ್ರಾರಂಭಿಸಿ ನಂತರ ನಕಾರಾತ್ಮಕವಾದ ವಿಷಯವನ್ನು ವಿಳಂಬನೆ ಮಾಡಿ ನಂತರ ತಿರಿಗಿ ಸಕಾರಾತ್ಮಕವಾಗಿ ಅಂತ್ಯಗೊಳಿಸುತ್ತಿದ್ದನು. ನಕಾರಾತ್ಮಕ ವಾದ ವಿಷಯಗಳು ಎರಡು "ರೊಟ್ಟಿಗಳ" ನಡುವೆ ಇರುವ ಪಧಾರ್ಥದಂತೆ, ಪ್ರೀತಿ ಮತ್ತು ಮೆಚ್ಚುಗೆಯ ನಡುವೆ ಸಕಾರಾತ್ಮಕವಾಗುತ್ತಿತು.

## ಒಳ್ಳೆಯ ಭಾಷಾಸಂಪರ್ಕ

ಮುಂದಿನ ಸದ್ಗುಣ, ಒಂದು "ಒಳ್ಳೆಯ ಭಾಷಾಸಂಪರ್ಕ" ಎಂದು ತಜ್ಞರು ಪಟ್ಟಿ ಮಾಡಿದ್ದಾರೆ.

ನನ್ನ ನಾಲ್ವತ್ತು ವರ್ಷದ ಸಲಹಾಗಾರನ ಅನುಭವದಲ್ಲಿ, ಸಮಸ್ಯೆಯಲ್ಲಿರುವ ಕುಟುಂಬ ಹಾಗು ದಾಂಪತ್ಯಜೀವನಕ್ಕೆ ಉಂಟಾಗುವ ಅಡಚಣೆಯೇ ಮುಖ್ಯವಾದ ಸಂಗತಿಯಾಗಿರುತ್ತದೆ ಎಂದು ನಾನು ಗಮನಿಸಿದ್ದೇನೆ. "ಉತ್ತಮವಾದ ಭಾಷಾ ಸಂಪರ್ಕದ ಮಾದರಿಯೇ" ಬಲವಾದ ಕುಟುಂಬಕ್ಕೆ ಹಾಗು ದಾಂಪತ್ಯಕ್ಕೆ, ಮಾದರಿ ಎಂದು ಕಲಿತಿರುವದರಲ್ಲಿ - ನನಗೆ ಆಶ್ಚರ್ಯವೆನಿಸುವದಿಲ್ಲ.[10]

ಮುಕ್ತವಾಗಿ ಮಾತನಾಡುವುದು - ಈ ಕೆಲವು ಸಂಗತಿಗಳು ಬಹು ಪ್ರಾಮುಖ್ಯ, ಆದರೆ ಇನ್ನೂ ಕೆಲವು ಕೊರತೆಗಳನ್ನು ನೀಗಿಸುವದು ಬಹಳ ಕಷ್ಟಕರವಾಗಿರುತ್ತದೆ. ಬರೆ ಯುವದರಲ್ಲೂ, ಮಾತನಾಡುವದರಲ್ಲೂ ತನ್ನ ಪೂರ್ಣ ಜೀವನವನ್ನೇ ಕಳೆದಿರುವ ನಾನು ಕೆಲವು ಸಾರಿ ಹತಾಶನಾಗುತ್ತೇನೆ. ಆಲೋಚನೆಯನ್ನು, ಯೋಜನೆಯನ್ನು ಅಥವಾ ಉದ್ವೇಗ ವನ್ನು ಒಬ್ಬನಿಂದ ಇನ್ನೊಬ್ಬನಿಗೆ ವರ್ಗಾಯಿಸುವುದು ಬಹಳ ಕಷ್ಟ!

ಭಾಷಾಸಂಪರ್ಕದ ಕುರಿತ ವಿಷಯ ಬಹು ವಿಸ್ತಾರವಾದದ್ದು, ಆದರೂ ಇಲ್ಲಿ ಬಲವಾದ ಕುಟುಂಬಗಳಲ್ಲಿ ಇರಬೇಕಾದ ಭಾಷಾಸಂಪರ್ಕದ ಸದ್ಗುಣಗಳ ಮಾದರಿಯ ಪಟ್ಟಿಯನ್ನು ನಮೂದಿಸಿದ್ದೇನೆ:

(1) ಬಲವಾದ ಕುಟುಂಬಗಳು, ಇತರ ಸದಸ್ಯರೊಂದಿಗೆ ಮುಕ್ತವಾಗಿ ಮಾತನಾಡುವ ಸಂಪರ್ಕವನ್ನು ಹೊಂದಿರುತ್ತಾರೆ; ಅವರು *ತಿಳಿಯುವವರು* ಮತ್ತು ತಿಳಿಸುವವರೂ ಆಗಿರು ತ್ತಾರೆ. ಅವರು ಹೇಳುವದಕ್ಕೂ ಮತ್ತು ಕೇಳುವದಕ್ಕೂ *ಸಮಯವನ್ನು* ನಿಗದಿ ಪಡಿಸುತ್ತಾರೆ.

(2) ಬಲವುಳ್ಳ ಕುಟುಂಬದ ಸದಸ್ಯರುಗಳು ತಮ್ಮ ಅನಿಸಿಕೆಗಳನ್ನು ಸ್ವತಂತ್ರವಾಗಿ ತಿಳಿಸುತ್ತಾರೆ - ಈ ತೆರದ ಬಾವನೆಯು ಪ್ರೋತ್ಸಾಹದಾಯಕವಾಗಿರುತ್ತದೆ.

(3) ಬಲವುಳ್ಳ ಕುಟುಂಬಗಳಲ್ಲಿ, ಎಲ್ಲರೂ ಎಲ್ಲಾ ವಿಷಯಗಳಿಗೂ ಒಂದೇ ರೀತಿಯಲ್ಲಿ ಆಲೋಚಿಸುವ ಅವಶ್ಯವಿಲ್ಲ. ವ್ಯತ್ಯಾಸವುಳ್ಳ ವ್ಯಕ್ತಿಗಳು ಪರಸ್ಪರ *ಗೌರವಿ*ಸುತ್ತಾರೆ.

(4) ಬಲವುಳ್ಳ ಕುಟುಂಬಗಳಲ್ಲಿ, *ಏನನ್ನು* ಹೇಳಿದ್ದಾರೆ ಎನ್ನುವದಕ್ಕಿಂತಲೂ *ಹೇಗೆ* ಹೇಳು ತ್ತಾರೆ ಎಂಬ ವಿಷಯ ಪ್ರಾಮುಖ್ಯವಾದದ್ದು.

(5) ಬಲವಾದ ಕುಟುಂಬಗಳು, ಮುಕ್ತವಾಗಿ ಮಾತನಾಡುವದು ಸಕಾರಾತ್ಮಕ ವಾದ ಕೇಂದ್ರಬಿಂದು ಆಗಿರುತ್ತದೆ, ಅದು ನಕಾರಾತ್ಮಕವಾಗಿರುವದಿಲ್ಲ.

(6) ಬಲವುಳ್ಳ ಕುಟುಂಬದ ಸದಸ್ಯರುಗಳು ಪರಸ್ಪರ ಕೇಳಿಸಿಕೊಳ್ಳುತ್ತಾರೆ - ಅವರ ಪ್ರತಿಕ್ರಿಯೆ ಮಾತಿನಲ್ಲಿಯೂ, ಕ್ರಿಯೆಯಲ್ಲಿಯೂ ಸಮಯಕ್ಕೆ ಅನುಗುಣವಾಗಿರುತ್ತದೆ.[11]

(7) ಬಲವುಳ್ಳ ಕುಟುಂಬಗಳಲ್ಲಿ, ಭಾಷಾಸಂಪರ್ಕವು ಸ್ವಯಂ ಪ್ರೇರಿತವಾಗಿ ಉನ್ನತ ಮಟ್ಟದ್ದಾಗಿರುತ್ತದೆ - ಅದು ವಿನೋದದಿಂದ ತುಂಬಿರುತ್ತದೆ.

ಈ ಸದ್ಗುಣದ ಕುರಿತು ಯಾವುದಾದರು ವಾಕ್ಯ ನೆನಪಿಗೆ ಬರುತ್ತದೆಯೇ? ಅನೇಕ

ವಾಕ್ಯಗಳು ಮಾತನಾಡುವ ಹಾಗು ಆಲಿಸುವ ಕುರಿತಾಗಿ ಇರುತ್ತವೆ. ಯಾಕೋಬ 1:19ಬಿ, "ಕಿವಿಗೊಡುವದರಲ್ಲಿ ತೀವ್ರವಾಗಿಯೂ, ಮಾತಾಡುವದರಲ್ಲಿ ನಿಧಾನ ವಾಗಿಯೂ, ಕೋಪಿಸುವದರಲ್ಲಿ ನಿಧಾನವಾಗಿಯೂ ಇರಲಿ." ನಮ್ಮ ಕುಟುಂಬದ ಇತರೆ ಸದಸ್ಯನೊಂದಿಗಿನ ಸಂಬಂಧದಲ್ಲಿ ಸಾಮಾನ್ಯ ಮನೋಬಾವದ ಸದ್ಗುಣವು ಇರಬೇಕೆಂದು ಈ ಕೆಳಗಿನ ವಾಕ್ಯ ತಿಳಿಸುತ್ತದೆ:

> ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ (ಎಪೆಸ 4:31, 32).
>
> ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವದರಿಂದ ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ. ಮತ್ತೊಬ್ಬನ ಮೇಲೆ ತಪ್ಪು ಹೊರಿಸುವದಕ್ಕೆ ಕಾರಣವಿದ್ದರೂ ತಪ್ಪು ಹೊರಿಸದೆ ಒಬ್ಬರಿಗೊಬ್ಬರು ಸೈರಿಸಿ ಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ. ಇದೆಲ್ಲಾದರ ಮೇಲೆ ಪ್ರೀತಿ ಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣಮಾಡುವ ಬಂಧವಾಗಿದೆ (ಕೊಲೊಸ್ಸೆ 3:12-14).

ನಾನು ಇನ್ನೊಂದು ಪಾಠದಲ್ಲಿ ತಿಳಿಸಿರುವ ಒಂದು ಚಿಕ್ಕ ವಚನವು ಸಮಯೋಚಿತ ವಾಗಿದೆ: "ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು" (ಎಫೆಸದವರಿಗೆ 4:15). ದೇವರ ಸತ್ಯದ ಕುರಿತಾಗಿ ಈ ವಾಕ್ಯದಲ್ಲಿ ಒತ್ತಿಹೇಳಲಾಗಿದೆ (ಯೊಹಾನ 17:17), ಆದರೆ ಅವರ ಹಿನ್ನೆಲೆ "ಸತ್ಯದ" ಕುರಿತಾಗಿ ವಿಶಾಲವಾದ ಉಪಯೋಗದ ಬಗ್ಗೆ ತಿಳಿಸುತ್ತದೆ. "ಸಾಮಾನ್ಯವಾದ ಸತ್ಯ" ಎಂಬದಾಗಿ ವಚನ 25ನ್ನು ಓದಿರಿ: "ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ, ..." ಇದನ್ನು ಕುಟುಂಬದ ಸಂಬಂಧಗಳಿಗೆ ಅಳವಡಿಸಿ ಕೊಳ್ಳೋಣ. ನಮಗೆ ಮಾತಿನ *ಸ್ವಾತಂತ್ರ* ಇರ ಬೇಕು; ಪರಸ್ಪರರಲ್ಲಿ ಸತ್ಯವನ್ನು ಸ್ವತಂತ್ರವಾಗಿ ಮಾತನಾಡಬೇಕು. ಆದೇ ಸಮಯದಲ್ಲಿ ಒಂದು ನಿಯಮವನ್ನು *ಪಾಲಿಸಬೇಕು*: ನಾವು ಮಾತನಾಡುವ ಪದಗಳು *ಪ್ರೀತಿಯಿಂದ* ಬರಬೇಕು. ಸತ್ಯ ಮತ್ತು ಪ್ರೀತಿ, ಈ ಎರಡು ವಿಷಯಗಳು ಪರಸ್ಪರ ಒಟ್ಟಾಗಿ ಇರಬೇಕು. ಇಲ್ಲಿರುವ ಸಾಲು ನೆನಪಿನಲ್ಲಿಡಲು ಯೋಗ್ಯವಾಗಿದೆ: "ಪ್ರೀತಿ ಇಲ್ಲದ ಸತ್ಯ ಅರಿವು ಇರದ ಸಂಗತಿ ಮತ್ತು ಕೆಟ್ಟ ಬಲಾತ್ಕಾರ, ಆದರೆ ಸತ್ಯವಿಲ್ಲದ ಪ್ರೀತಿ ಕಪಟತನ."

## ಒಟ್ಟಾಗಿ ಕೂಡುವದಕ್ಕೆ ಸಮಯ

ಪಟ್ಟಿಯಲ್ಲಿರುವ ಮುಂದಿನ ಸದ್ಗುಣ "ಒಟ್ಟಾಗಿ ಕೂಡಿ ಸಮಯವನ್ನು ಕಳೆಯುವುದು." ಸಹಜವಾದ, ಅನೇಕ ಸದ್ಗುಣಗಳು ಪರಸ್ಪರ ಸಂಬಂಧ ಹೊಂದಿರುತ್ತವೆ: ನೀವು ಒಟ್ಟಾಗಿ ಸೇರಿ ಸಮಯವನ್ನು ಕಳೆಯದೆ ಹೋದರೆ, ನೀವು ಪರಸ್ಪರ ಮೆಚ್ಚುವದಾಗಲಿ, ಅಥವಾ ಮಾತಿನ ಸಂಪರ್ಕದಲ್ಲಿ ಇರುವದಕ್ಕೆ ಸಾಧ್ಯವಿಲ್ಲ.

ಒಟ್ಟಾಗಿ ಸೇರಿ - ಹೆಚ್ಚಾದ ಸಮಯವನ್ನು ಮತ್ತು ಗುಣಯೋಗ್ಯ ಸಮಯವನ್ನು ಕಳೆ ಯಬೇಕು[12] - ಅನೇಕ ಕುಟುಂಬಗಳಿಗೆ ಇದು ದೊಡ್ಡಸಮಸ್ಯೆಯಾಗಿಯೂ, ಸವಾಲಾಗಿಯೂ ಇರುತ್ತದೆ. ಡಾ. ಸ್ಟಿನ್ನೆಥ್ ಡಾಲ್‌ರಸ್ ಕುರ್ರನ್ ವಿಷಯದಲ್ಲಿಯೂ ಒಂದು ಸಂಶೋಧನೆ ಯನ್ನು ಮಾಡಿದ್ದಾರೆ. *ಆರೋಗ್ಯಕರವಾದ ಕುಟುಂಬಕ್ಕೆ* ವಿಶೇಷ *ಗುಣಗಳು* ಎಂಬ ತಲೆಬರಹದ ಪ್ರಸ್ತಕವನ್ನು ಬರೆದಿದ್ದಾರೆ. *ಸಮಯವನ್ನು* ನೀಡದೆ ಇರುವದು ಆರೋಗ್ಯಕರ

ವಾದ ಕುಟಂಬದ ಬದ್ಧ ವೈರಿಯಾಗಿರುತ್ತದೆ. ಇನ್ನೊಂದು ಅಧಿಕಾರಯುತ, ಹೇಳಿಕೆಯನ್ನು ಜೀಮ್ಸ್ಯೂಡಾಬ್ಸನ್‌ರವರು ಹೇಳಿದ್ದಾರೆ. ಸಮಯ ಪಾಲನೆಗೆ ಅತಿಯಾಗಿ ಒಪ್ಪಿಸಿಕೊಟ್ಟ ಯಾವುದೇ, ಕುಟುಂಬಗಳ ಪರಿಚಯ ನನಗಿಲ್ಲ ಎಂದು ತಿಳಿಸಿದ್ದಾರೆ.[13]

ಒಂದು ಕಾಲದಲ್ಲಿ ನಮ್ಮ ಕುಟುಂಬದ ಸುತ್ತಲೂ, ಕಾರ್ಯ ಚಟುವಟಿಕೆಗೆಳು ಜರುಗುತ್ತಿದ್ದವು, ಆದರೆ ಅನೇಕ ಕುಟುಂಬಗಳಲ್ಲಿ ಅದು ಸತ್ಯವಾಗಿರುವದಿಲ್ಲ. ಯಾಕೆಂದರೆ ಮನೆಯ ಮಕ್ಕಳು ಇತರೆ ಸಂಘಟನೆಗಳ ಚಟುವಟಿಕೆಗಳಲ್ಲಿ ಭಾಗಿಗಳಾ ಗುವದರಿಂದ ಕುಟುಂಬದ ಜೀವನವು ಛಿದ್ರವಾಗಿವೆ ಒಟ್ಟಾಗಿ ಸಮಯವನ್ನು ಕಳೆಯಲು ಕುಟುಂಬಗಳಿಗೆ ಕಷ್ಟವಾಗುತ್ತದೆ. ಬಲವುಳ್ಳ, ಆರೋಗ್ಯಕರವಾದ, ಸಂತೋಷದ ಕುಟುಂಬಗಳು ಸಮಯವನ್ನು ಒಟ್ಟಾಗಿ ಕಳೆಯುತ್ತಾರೆ.

ಸಮಯವನ್ನು ಕಳೆಯುವ ಅವಶ್ಯವಿದೆ ಎಂಬುದಾಗಿ ನೋಡುತ್ತೇವೆ ಧರ್ಮೋಪದೇಶ ಕಾಂಡ 6:5-7, 9:

> ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು. ನಾನು ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು; ಇವುಗಳನ್ನು ನಿಮ್ಮ ಮಕ್ಕಳಿಗೆ ಅಭ್ಯಾಸಮಾಡಿಸಿ ಮನೆಯಲ್ಲಿ ಕೂತಿರುವಾಗಲೂ ದಾರಿ ನಡೆಯುವಾಗಲೂ ಮಲಗುವಾ ಗಲೂ ಏಳುವಾಗಲೂ ಇವುಗಳ ವಿಷಯದಲ್ಲಿ ಮಾತಾಡಬೇಕು. ಇವುಗಳನ್ನು ಜ್ಞಾಪಕಾರ್ಥವಾಗಿ ಕೈಗೆ ಕಟ್ಟಿಕೊಳ್ಳಬೇಕು; ಇವು ಹಣೆಗೆ ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತೆ ಇರಬೇಕು. ನಿಮ್ಮ ಮನೆ ಬಾಗಲಿನ ನಿಲುವು ಪಟ್ಟಿಗಳಲ್ಲಿಯೂ ತಲೆಬಾಗಲುಗಳ ಮೇಲೆಯೂ ಇವುಗಳನ್ನು ಬರೆಯ ಬೇಕು (ಧರ್ಮೋಪದೇಶ ಕಾಂಡ 6:5-7, 9).

ನೀವು ನಿಮ್ಮ ಮಕ್ಕಳು ಕುಟುಂಬದಲ್ಲಿ ಒಟ್ಟಾಗಿ ಇರಬೇಕೆಂದು ಈ ವಾಕ್ಯದಲ್ಲಿ ಸೂಚಿಸಲಾಗಿದೆ, ಮತ್ತು ಪ್ರಯಾಣದಲ್ಲೂ, ನಿದ್ರಿಸುವಾಗಲೂ ಒಟ್ಟಾಗಿ ಇರುವಿರೆಂದು ಸೂಚಿಸಲಾಗಿದೆ.

ಪ್ರತಿಯೊಂದು ಹೆಜ್ಜೆಯು ಒಟ್ಟಾಗಿ ಇರಬೇಕೆಂದು ತಿಳಿಸುತ್ತಿರುವದಿಲ್ಲ.[14] ತಂದೆ ತಾಯಿಗಳು ಮಕ್ಕಳೊಂದಿಗೆ ಇರಲು ಸಮಯವನ್ನು ತೆಗೆದುಕೊಳ್ಳಬೇಕು. ಯೌವನಸ್ಥರಾಗುತ್ತಿರುವ ಮಕ್ಕಳು ತಂದೆ ತಾಯಿಗಳೊಂದಿಗಿರಲು ಸಮಯವನ್ನು ತೆಗೆದುಕೊಳ್ಳಬೇಕು. ನಮ್ಮ ವೇಳಾ ಪಟ್ಟಿಯಲ್ಲಿ ಕೌಟುಂಬಿಕ ಚಟುವಟಿಕೆಗಳನ್ನು ಸೇರಿಸಿಕೊಳ್ಳಬೇಕು. (ಕೆಲವು "ಕುಟುಂಬದಲ್ಲಿ ರಾತ್ರಿಯ" ಸಮಯವೇ ನಿಗದಿ ಪಡಿಸಿದ ಸಮಯವಾಗಿರುತ್ತದೆ.) ಈ ಸಂಗತಿಗಳನ್ನು ಮಾಡಲು ನಮಗೆ ದೊರಕುವ ಮೂಲಭೂತ ಸೌಲಭ್ಯಗಳನ್ನೂ ಕ್ರೂಢಿಕರಿಸಿ ಯಾವುದು ಪ್ರಾಮುಖ್ಯವಾದದ್ದು ಎಂದು ನಿರ್ಧರಿಸಬೇಕು (ಮತ್ತಾಯ 6:24-34). ಉದಾಹರಣೆಗೆ, ಡಾಲರ್ಸ್ ಕರ್ರನ್‌ರವರು ಕಂಡುಕೊಂಡಿದ್ದೇನೆಂದರೆ, ಆರೋಗ್ಯಕರವಾದ ಕುಟುಂಬಗಳು ಬೇರೆಯವರಿಗಿಂತ ದೂರದರ್ಶನವನ್ನು ಕಡಿಮೆಯಾಗಿ ನೋಡುವವರಾಗಿದ್ದಾರೆ.

## ಕೌಟುಂಬಿಕ ಕಟ್ಟುಪಾಡು

ಮುಂದಿನ ಸದ್ಗುಣ: "ಕೌಟುಂಬಿಕ ಕಟ್ಟುಪಾಡು" ಎಂದು ವಿವರಿಸಲಾಗಿದೆ.

ಕೌಟುಂಬಿಕ ಕಟ್ಟುಪಾಡಿನಲ್ಲಿ ಎರಡು ವಿಧಗಳುಂಟು.(1) ಪೂರ್ಣ ಕುಟುಂಬಕ್ಕೆ ಒಪ್ಪಿಸಿಕೊಡುವಿಕೆ; ಕುಟುಂಬ ಕಾರ್ಯನಿರತವಾಗುವಂತೆ ಮಾಡುವುದು ಅದು ನಿರಂತರ ವಾಗಿರುವಂತೆ ಮಾಡುವುದು. (2) ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗಳ ಕುರಿತು ಸಮಾಲೋಚನೆ ಮಾಡುವುದು ಸಹೋದರರ ಸಹೋದರಿಯರ ಬಗ್ಗೆ ಮಾತನಾಡದೆ ಇರುವುದು. ನನ್ನ ಪೂರ್ತಿ ಜೀವಮಾನದಲ್ಲಿ ಒಂದು ಸಿದ್ಧಾಂತವನ್ನು ರೂಢೀ ಕಲಿಸಿಕೊಂಡಿದ್ದೆ. "ಕಾಯ್ ಬಗ್ಗೆ ನಾನು ಮಾತನಾಡಬಹುದಿತ್ತು ಆದರೆ *ನೀನು* ಮಾತನಾಡದೆ ಇರುವುದೇ ಉತ್ತಮವಾದದ್ದು,

*ಯಾಕೆಂದರೆ ಅವನು ನನ್ನ ಸಹೋದರ.*"

ಪ್ರತಿಯೊಬ್ಬರಿಗೂ "ಕುಟುಂಬದ" ಕುರಿತಾದ ಜ್ಞಾನವಿರಬೇಕು, ಎಂದು ಸಂಶೋಧಕರು ಕಂಡುಹಿಡಿದಿದ್ದಾರೆ; ಪ್ರತಿಯೊಬ್ಬರಿಗೂ ಅಡಿಪಾಯದ ಅವಶ್ಯವಿದೆ, ಪ್ರತಿಯೊಬ್ಬರಿಗೂ ಕುಟುಂಬದ ಕಟ್ಟುಪಾಡುಗಳ ಅವಶ್ಯವಿದೆ ಇದು ಕುಟುಂಬವು, ಬದುಕುವಂತೆ ಸಹಾಯಿಸುತ್ತದೆ.

ಸಾಮಾನ್ಯ ಜ್ಞಾನದ ಕುರಿತು ಅನೇಕ "ವಾಕ್ಯಭಾಗಗಳುಂಟು." ಉದಾಹರಣೆಗೆ 1 ತಿಮೊಥೆಯ 5:4, "ಆದರೆ ಒಬ್ಬ ವಿದವೆಗೆ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ, ಇದ್ದರೆ ಅವರೇ ಮೊದಲು ತಮ್ಮ ಮನೆಯವರಿಗೆ ಭಕ್ತಿ ತೋರಿಸುವದಕ್ಕೂ ತಂದೆ ತಾಯಿಗಳಿಗೆ ಪ್ರತ್ಯುಪಕಾರ ಮಾಡುವದಕ್ಕೂ ಕಲಿತುಕೊಳ್ಳಲಿ." ಇದು ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾದದ್ದು ಎಂದು NIV ತಿಳಿಸುತ್ತದೆ. "ಮಕ್ಕಳು ಅಥವಾ ಮೊಮ್ಮಕ್ಕಳು, ... ತಮ್ಮ ಕುಟುಂಬವನ್ನೂ ತಂದೆತಾಯಿಗಳನ್ನು ಪರಿಚಾರ ಮಾಡುವದರ ಮೂಲಕ ತಮ್ಮ ಧರ್ಮವನ್ನು ಸಾಭೀತುಪಡಿಸಬೇಕು, ತಂದೆ ತಾಯಿಯರಿಗೂ ಅಜ್ಜ ಅಜ್ಜಿಯರಿಗೂ ಅವರ ಋಣವನ್ನು ತೀರಿಸಬೇಕು. ಇದು ದೇವರಿಗೆ ಮೆಚ್ಚಿಗೆಯಾದದ್ದಾಗಿದೆ."

ಇನ್ನೊಂದು ದೇವರ ವಾಕ್ಯದ ಭಾಗ 1 ತಿಮೊಥೆಯ 5:8: "ಯಾವನಾದರೂ ಸ್ವಂತ ಜನರನ್ನು ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡಿಮೆಯಾದವನೂ ಆಗಿದ್ದಾನೆ." ನಂಬದವರೂ ಸಹ ಕುಟುಂಬದ ಕುರಿತು ಸಾಮಾನ್ಯ ಜ್ಞಾನವನ್ನು ಹೊಂದಿರುವರು ಎಂದು ಪೌಲನು ಸಹ ಗಮನಿಸಿದ್ದಾನೆ. ಕ್ರೈಸ್ತರು ಅದನ್ನು ಮಾಡದೆ ಹೋದರೆ ಅದು ದುಃಖಕರವಾದದ್ದೆ!

ಕುಟುಂಬಕ್ಕೆ ಒಡಂಬಡುವುದು ಎಲ್ಲಿ ಪ್ರಾರಂಭವಾಗುತ್ತದೆ? ಅದು ತಂದೆ ತಾಯಿಯಿಂದ ಪ್ರಾರಂಭವಾಗುತ್ತದೆ (1) ಯಾರ್ಯಾರು ತಮ್ಮ ಮದುವೆಯ ಜೀವಿತವನ್ನು ಸರಾಗಮಾಡಬೇಕೆಂದು ಒಡಂಬಟ್ಟಿದಾರೋ ಅವರಲ್ಲಿ, (2) ಯಾರ್ಯಾರು ಮತ್ತಾಯ 19:3-9 ಈ ವಾಕ್ಯವನ್ನು ಮತ್ತು ಮದುವೆಯು ಜೀವನ ಪರ್ಯಂತರ ಎಂಬುದಾಗಿ ತಿಳಿಸುವ ವಾಕ್ಯವನ್ನು ನಂಬುತ್ತಾರೋ ಅವರಲ್ಲಿ (3) ಯಾರ್ಯಾರು ದೇವರ ಪ್ರೀತಿಯಿಂದ ತುಂಬಿಸಲ್ಪಟ್ಟಿರುತ್ತಾರೋ, ಪ್ರೀತಿಗೆ ಒಡಂಬಟ್ಟಿರುತ್ತಾರೋ, ಇತರರನ್ನು - ಸಂತೋಷ ಪಡಿಸಲು ಒಡಂಬಟ್ಟಿರುತ್ತಾರೋ ಅವರಿಂದ ಪ್ರಾರಂಭವಾಗುತ್ತದೆ.

ಇನ್ನೂ ನಿನಗೆ ಅರ್ಥವಾಗದಿದ್ದರೆ ಈ ಎಲ್ಲಾ ಸದ್ಗುಣಗಳಿಗೆ, ತಂದೆ ತಾಯಿಗಳೇ[15] ಬೀಗದ ಕೀಲಿಗಳಾಗಿರುತ್ತಾರೆ - *ತಂದೆಯು, ತಾಯಿಗಿಂತ ಹೆಚ್ಚಾದ ಗುಣಗಳನ್ನು ಹೊಂದಿದವನಾಗಿರಬೇಕು.*

## ಧಾರ್ಮಿಕ ಮೌಲ್ಯಗಳು

ಆರೋಗ್ಯದಾಯಕವಾದ, ಸಂತೋಷಭರಿತವಾದ, ಕುಟುಂಬಕ್ಕೆ ಉನ್ನತ ಮಟ್ಟದ "ಧಾರ್ಮಿಕ ತರಬೇತಿಯು ಇನ್ನೊಂದು ಸದ್ಗುಣವಾಗಿರುತ್ತದೆ."

ಡಾ. ಸ್ಟಿನ್ನೆಥ್ ತಿಳಿಸಿರುವಂತೆ ಧಾರ್ಮಿಕ ಮೌಲ್ಯಗಳಲ್ಲಿ, ಸಭೆಗೆ ಹಾಜರಾಗುವುದು ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲು ದಾರರಾಗುವದು ಸಹ ಸೇರಿರುತ್ತದೆ, ಆದರೆ ಇದಕ್ಕಿಂತಲೂ ಉತ್ತಮವಾದಂಥ ಇನ್ನೊಂದು ಸಂಗತಿಯು ಸಹ ಅದರಲ್ಲಿ ಸೇರಿದೆ ಬಲವುಳ್ಳ ಕುಟುಂಬಗಳು. "ಆತ್ಮೀಕ ಜೀವನ ಶೈಲಿಯನ್ನು" ಹೊಂದಿರುತ್ತವೆ. ಇನ್ನೊಂದು ಪದದಲ್ಲಿ ಅವರ ನಂಬಿಕೆಯು ಜೀವನದ ಪ್ರತಿಯೊಂದು ಕ್ಷೇತ್ರವನ್ನು ಸ್ಪರ್ಶಿಸುತ್ತಿರುತ್ತದೆ. ತಂದೆ ತಾಯಿಗಳು ಮಕ್ಕಳೊಂದಿಗೆ ಭಾಷಾಸಂಪರ್ಕವನ್ನು ಹೊಂದಿರುತ್ತಾರೆ, "ನಾವು ಏನಾಗಿದ್ದೇವೋ, ಅದಕ್ಕಾಗಿ, ನಾವು ಮಾಡಬೇಕಾದ ಕಾರ್ಯವನ್ನು ಮಾಡುತ್ತಿದ್ದೇವೆ ಮತ್ತು ನಮ್ಮ

ನಂಬಿಕೆಗೆ ಅನುಗುಣವಾಗಿ ನಾವಿದ್ದೇವೆ."

ಆಳವಾದ ಧಾರ್ಮಿಕ ಮನವರಿಕೆಗಳು ಸಹ ಆರೋಗ್ಯಕರವಾದ ಕುಟುಂಬಗಳಿಗೆ ಕೊಡುಗೆಯಾಗಿದೆ. ಅವರ ಮನವರಿಗೆಗಳು ಜೀವಿತಕ್ಕೆ ಬಲ ಮತ್ತು ಉದ್ದೇಶದ ಜ್ಞಾನವಾಗಿರುತ್ತದೆ. ಕುಟುಂಬದ ಸದಸ್ಯರು ಧಾರ್ಮಿಕ ಮನವರಿಕೆಗಳಿಂದ ಆಧಾರ ಮತ್ತು ಶಕ್ತಿಯನ್ನು ಸೆಳೆಯುವವರಾಗಿದ್ದಾರೆ. ಅವರು ಧಾರ್ಮಿಕ ಅಧ್ಯಾಯನದ ಮೂಲಕ, ತಾಳ್ಮೆಯನ್ನೂ, ಕ್ಷಮಾಪಣೆಯನ್ನೂ, ಕಲಿಯುವವರಾಗಿದ್ದಾರೆ. ಮತ್ತು ಕೋಪವನ್ನು ನಿಗ್ರಹಿಸುವುದನ್ನು, ಸಕಾರಾತ್ಮಕವಾಗಿ ಯೋಚಿಸುವ ಪ್ರಾಮುಖ್ಯತೆಯನ್ನೂ ಕಲಿಯುವವರಾಗಿದ್ದಾರೆ. ಕುಟುಂಬಕ್ಕೆ ಅವಶ್ಯವಿರುವ ಸಕಲ ಸಂಗತಿಗಳನ್ನು ಕಲಿಯುತ್ತಾರೆ. ಅವರ ಸಾಮಾನ್ಯ ಮೌಲ್ಯಗಳು ಬಲವುಳ್ಳ ಹಾಗು ಸಂತೋಷಭರಿತವಾದ ಕುಟುಂಬಗಳಿಗೆ, "ನಿಯಮ"ಗಳನ್ನು ನಿರ್ಮಿಸುತ್ತವೆ.

ಸ್ಟಿನ್ನೆಥ್‌ರವರು ರಚಿಸಿರುವ ಈ ಆರು ಸದ್ಗುಣಗಳಲ್ಲಿ ಒಂದು ಅಂಶವನ್ನು ಮಾತ್ರ ಸೂಕ್ಷ್ಮವಾಗಿ ಬದಲಾಯಿಸುತ್ತೇನೆ. ನಮ್ಮ ಅಧ್ಯಾಯನದ ತಲೇಬರಹ: "ಬಲವಾದ ಹಾಗು ಸಂತೋಷವುಳ್ಳ *ಕ್ರೈಸ್ತ ಕುಟುಂಬವನ್ನು* ಕಟ್ಟುವ ವಿಷಯವಾಗಿರುತ್ತದೆ." ಇದನ್ನು ಈ ರೀತಿಯಾಗಿ ಬದಲಾಯಿಸುತ್ತೇನೆ. "*ಕ್ರೈಸ್ತರ* ಮೌಲ್ಯಗಳನ್ನು ಅಧ್ಯಾಯನ ಮಾಡುವದಕ್ಕೆ *ಧಾರ್ಮಿಕ* ಮೌಲ್ಯಗಳು."

ಸ್ಟಿನ್ನಥ್‌ರವರು ಅಧ್ಯಾಯನದ ಕ್ರಮಾಂಕದಲ್ಲಿ ಇರುವಂತೆ "ಮೌಲ್ಯಗಳನ್ನು" ಐದನೆಯ ಪಾಠವನ್ನಾಗಿ ಪಟ್ಟಿಮಾಡಿದ್ದೇನೆ. ಇದು ಕ್ರಮಾಂಕದ ಮೊದಲ - ಸ್ಥಾನದಲ್ಲಿ ಇರಬೇಕು ಎಂಬ ಆಲೋಚನೆಯನ್ನು ನನ್ನೊಂದಿಗೆ ನೀವು ಸಹ ಒಪ್ಪುವಿರಿ ಎಂಬುದಾಗಿ ನೆನಸುತ್ತೇನೆ. ನಮ್ಮ ಮೂಲ ವಾಕ್ಯಭಾಗವನ್ನು ನೆನಪುಮಾಡಿಕೊಳ್ಳಿರಿ: "ಯೆಹೋವನು ಮನೆಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ." ಮೌಲ್ಯಗಳ ಕುರಿತಾಗಿ ಅನೇಕ ನಿಯಮಗಳನ್ನು ತೋರಿಸಬಹುದು (ತೋರಿಸಬೇಕು) ಆದರೆ ನಾಲ್ಕು ಮೌಲ್ಯಗಳನ್ನು ಮಾತ್ರ ನೋಡೋಣ.

(1) ಬಲವುಳ್ಳ ಹಾಗು ಸಂತೋಷಕರವಾದ *ಕ್ರೈಸ್ತ* ಕುಟುಂಬದಲ್ಲಿ ತಂದೆ ತಾಯಿಗಳಿಬ್ಬರೂ ನಂಬಿಗಸ್ತರಾದ ಕ್ರೈಸ್ತರಾಗಿಬೇಕು, ಮತ್ತು ಕ್ರಿಸ್ತನಿಗಾಗಿ ಒಪ್ಪಿಸಿಕೊಟ್ಟವರಾಗಿರಬೇಕು. ಕುಟುಂಬದ ಸದಸ್ಯರು, ಪರಸ್ಪರ ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ ಕ್ರಿಸ್ತನನ್ನು "ಧರಿಸಿ" ಕೊಂಡವರಾಗಿರಬೇಕು (ಗಲಾತ್ಯ 3:26, 27).

(2) ಬಲವುಳ್ಳ ಹಾಗು ಸಂತೋಷಕರವಾದ *ಕ್ರೈಸ್ತ* ಕುಟುಂಬದಲ್ಲಿ ಮಕ್ಕಳಿಗೆ ದೈವೀಕ ಹಾಗು ತರಬೇತಿ ನೀಡುವ ಜವಾಬ್ದಾರಿಯು ತಂದೆ ತಾಯಿಗಳದ್ದಾಗಿರುತ್ತದೆ. ಮಕ್ಕಳಿಗೆ ಬೈಬಲ್ ಶಾಲೆಯು ದೊರಕುವುದಾದರೆ, ಅದು ಎರಡನೆಯ ವಿಷಯ ಮತ್ತು ಸಹಾಯಕ, ಆದರೆ ಪ್ರಾಥಮಿಕ ಜವಾಬ್ದಾರಿಯು ತಂದೆ ತಾಯಿಗಳ ಬುಜದ ಮೇಲೆ ಇರುತ್ತದೆ (ಮುಖ್ಯವಾಗಿ ತಂದೆಯರ ಮೇಲೆ; ಎಫೆಸ 6:4ನ್ನು ನೋಡಿರಿ).

(3) ಬಲವುಳ್ಳ ಹಾಗು ಸಂತೋಷಕರವಾದ *ಕ್ರೈಸ್ತ* ಕುಟುಂಬದಲ್ಲಿ ಜವಾಬ್ದಾರಿಯನ್ನು ಹೊರುವ ವಯಸ್ಸಿಗೆ ಬಂದಿರುವಂಥ ಎಲ್ಲಾ ಸದಸ್ಯರುಗಳು ದೇವರ ಸಭೆಗೆ ನಂಬಿಗಸ್ತರಾದ ಸದಸ್ಯರುಗಳಾಗಿರಬೇಕು. ಕೇವಲ ಸಭೆಗೆ ಹಾಜರಾಗುವವರಾಗಿರದೇ ಅದರಲ್ಲಿ ಕಾರ್ಯನಿರತ ಸದಸ್ಯರಾಗಿರಬೇಕು. ಯಾಕೆಂದರೆ ಸಭೆಯು; ಕುಟುಂಬದ "ಇನ್ನೊಂದು ಶಾಲೆಯಾಗಿರುತ್ತದೆ."[16]

(4) ಬಲವಾದ ಹಾಗು ಸಂತೋಷಕರವಾದ *ಕ್ರೈಸ್ತ* ಕುಟುಂಬಕ್ಕೆ (ತಂದೆ ತಾಯಿಗಳನ್ನೂ) ಒಳಗೊಂಡು, ಪ್ರತಿಯೊಬ್ಬ ಕುಟುಂಬದ ಸದಸ್ಯನು, ಜೀವಿತದ ಪ್ರತಿಯೊಂದು ಕೇತ್ರಗಳಲ್ಲಿ ಕ್ರಿಸ್ತೀಯ ನೇಮನಿಷ್ಟೆಗಳನ್ನು ಪಾಲಿಸಬೇಕು. ಅದು ಕುಟುಂಬದಲ್ಲಿಯೇ - ಪ್ರಾರಂಭವಾಗಬೇಕು.

## ಬಿಕ್ಕಟ್ಟಿನ ಪರಿಹಾರ

"ಸಕಾರಾತ್ಮಕವಾಗಿ ಬಿಕ್ಕಟ್ಟನ್ನು ಪರಿಹರಿಸುವ ಕುಶಲತೆ"ಯು ಕಡೆಯದಾದ ಸದ್ಗುಣವಾಗಿದೆ.

"ಬಿಕ್ಕಟ್ಟು" ಒಂದು ದೊಡ್ಡ ಸಮಸ್ಯೆ. ಅದನ್ನು ಸರಳವಾಗಿ ಪರಿಹರಿಸಲು ಸಾಧ್ಯವಿಲ್ಲದೆ ಇರುವದರಿಂದ ಅದು ಬಿಕ್ಕಟ್ಟಾಗಿರುತ್ತದೆ.[17] ಬಲಹೀನವಾದ ಕುಟುಂಬಗಳಲ್ಲಿ ಹೇಗೋ ಹಾಗೆಯೇ ಬಲವುಳ್ಳ ಕುಟುಂಬಗಳಲ್ಲೂ ಬಿಕ್ಕಟ್ಟುಗಳು ಉಂಟು. ಆದರೆ ಅದನ್ನು ಪರಿಹರಿಸುವ ವಿಧದಲ್ಲಿ ವ್ಯತ್ಯಾಸವುಂಟು; ಬಲವುಳ್ಳ ಕುಟುಂಬಗಳು *ಸಕಾರಾತ್ಮಕವಾಗಿ* ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವವು.

ಆರೋಗ್ಯದಾಯಕ ಕುಟುಂಬಗಳು ಸಕಾರಾತ್ಮಕವಾಗಿ ಬಿಕ್ಕಟ್ಟುಗಳನ್ನು ಬಗೆ ಹರಿಸುವರು ಯಾಕೆಂದರೆ, ಈಗಾಗಲೆ ಪಟ್ಟಿಯಲ್ಲಿ ತಿಳಿಸಿರುವ ಸದ್ಗುಣಗಳು ಅವರಲ್ಲಿ ಇರುತ್ತವೆ. ಅವರು ಪರಸ್ಪರ ಸಮಯವನ್ನು ಕಳೆಯುವದರಿಂದಲೂ ಮತ್ತು ಪರಸ್ಪರ ಮೆಚ್ಚಿಕೊಳ್ಳುವಂಥ ಈ ಬಲವಾದ ಸಂಬಂಧಗಳು ಅವರಲ್ಲಿ ಇರುವಾಗ; ಬಿಕ್ಕಟ್ಟನ ಸಮಯದಲ್ಲಿ ಇಬ್ಭಾಗವಾಗದ ರೀತಿಯಲ್ಲಿ ಸಮಸ್ಯೆಯನ್ನು ಎದುರಿಸುತ್ತಾರೆ. ಅವರಲ್ಲಿ ಭಾಷಾಸಂಪರ್ಕವಿರುವದರಿಂದ ಬಿಕ್ಕಟ್ಟನ್ನು ಮಾತಿನ ಮೂಲಕ ಪರಿಹರಿಸಿಕೊಳ್ಳುವರು. ಅವರು ತಮ್ಮ ಕುಟುಂಬಕ್ಕೆ ತಮ್ಮನ್ನು ಒಪ್ಪಿಸಿಕೊಟ್ಟಿರುವದರಿಂದ ಕುಟುಂಬವು ಒಡೆದು ಹೋಗದಂತೆ ಜಾಗ್ರುತರಾಗಿರುತ್ತಾರೆ. ಅವರು ನಂಬಿಗಸ್ತರಾಗಿರುವದರಿಂದ, ಬಿಕ್ಕಟ್ಟಿನಲ್ಲಿ ಸಕಾರಾತ್ಮಕವಾದ ಲಾಭವನ್ನು ಪಡೆಯುತ್ತಾರೆ.

ಬಿಕ್ಕಟ್ಟನ್ನು ಪರಿಹರಿಸುವುದು ಸುಲಭವಲ್ಲ ಇತರರಂತೆ ಆರೋಗ್ಯಕರವಾದ ಕುಟುಂಬಗಳು ಸಹ ಸಮಸ್ಯೆಯ ನಿಮಿತ್ತ ಕಷ್ಟವನ್ನು ಅನುಭವಿಸುತ್ತಾರೆ. ಹೇಗೂ, ಅವರ ಕುಟುಂಬಗಳಲ್ಲಿ ಸಕಾರಾತ್ಮಕವಾದ ಗುಣಗಳು ಇರುವದರಿಂದ, ಬಲಹೀನವಾಗದೆ, ಬಲವಾದ ಮತ್ತು ಆರೋಗ್ಯದಾಯಕವಾದ ಕುಟುಂಬಗಳಾಗಿ ವಿಜಯಿಗಳಾಗುತ್ತಾರೆ.

ಬಿಕ್ಕಟ್ಟುಗಳ ವಿಷಯದಲ್ಲಿ ಸಕಾರಾತ್ಮಕವಾಗಿ ಪರಿಹರಿಸಿಕೊಳ್ಳುವ *ಕ್ರೈಸ್ತ* ಕುಟುಂಬಗಳ ಹಾಗೆ, ಇತರೆ ಯಾವುದೇ ಕುಟುಂಬಗಳಲ್ಲಿ ಸಾಧ್ಯವಿಲ್ಲ. ಅವರಿಗೆ ಪರಸ್ಪರ ಬಲದ ಜೊತೆಗೆ ಈ ಕೆಳಕಂಡ ವಾಗ್ದಾನಗಳು ಸಹ ಇರುತ್ತವೆ:

> ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತಿದೆ (ರೋಮಾಪುರ 8:28).

> ನನ್ನ ಸಹೋದರರೇ, ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟುಮಾಡುತ್ತದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ. ಆ ತಾಳ್ಮೆಯು ಸಿದ್ಧಿಗೆ ಬರಲಿ; ಆಗ ನೀವು ಶಿಕ್ಷಿತರೂ ಸರ್ವಸುಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ (ಯಾಕೋಬ 1:2-4).

## ಮುಕ್ತಾಯ

ಬಲವುಳ್ಳ ಹಾಗು ಸಂತೋಷವುಳ್ಳ ಕ್ರೈಸ್ತ ಕುಟುಂಬಗಳ ಕುರಿತು ನಾವು ಕಲಿತ ಆ ಆರು ಸದ್ಗುಣಗಳ ಕಡೆಗೆ ಕೊನೆಯ ಇನ್ನೊಂದು ನೋಟವನ್ನು ನೋಡೋಣ:

(1) ಮೆಚ್ಚುಗೆಯನ್ನು ತೋರ್ಪಡಿಸಲಾಗುತ್ತದೆ.

(2) ಭಾಷಾಸಂಪರ್ಕದ ಮಾದರಿಯು ಒಳ್ಳೆಯದಾಗಿರುತ್ತದೆ.

(3) ಆ ಕುಟುಂಬವು ಪರಸ್ಪರ ಸಮಯವನ್ನು ಕಳೆಯುತ್ತಾರೆ.

(4) ಕುಟುಂಬದ ಇತರೆ ಸದಸ್ಯರು ಪರಸ್ಪರವಾಗಿ ಒಡಂಬಟ್ಟಿರುತ್ತಾರೆ.

(5) ಅವರಲ್ಲಿ ಉನ್ನತವಾದ ಧಾರ್ಮಿಕ (ಕ್ರೈಸ್ತ) ಬೋಧನೆ ಇರುತ್ತದೆ.

(6) ಬಿಕ್ಕಟ್ಟಿನ ಸಮಯದಲ್ಲಿ, ಸಕಾರಾತ್ಮಕವಾಗಿ ಬಿಕ್ಕಟ್ಟನ್ನು ಪರಿಹರಿಸಿ ಕೊಳ್ಳುತ್ತಾರೆ.

ಎಲ್ಲಾ ಸಮಯದಲ್ಲಿಯೂ, ನಾವು ಸತ್ಯವಂತರಾಗಿರಬೇಕು. ಕೆಲವು ಕುಟುಂಬಗಳಲ್ಲಿ ಶೇಖಡ 100%ರಷ್ಟು ಈ ಆರು ಸದ್ಗುಣಗಳು ಇರುತ್ತದೆ. ಪ್ರತಿ ಕುಟುಂಬದಲ್ಲೂ ಕೆಟ್ಟ ಹಾಗು ಒಳ್ಳೆಯ ದಿವಸಗಳಿರುತ್ತದೆ. ಆದರೆ ನಾವೆಲ್ಲರೂ ಈ ಆರು ಸದ್ಗುಣಗಳನ್ನು; ಅತಿ ಅವಸರ ವಾಗಿ, ನಮ್ಮ ಕುಟುಂಬಗಳಲ್ಲಿ ಅಳವಡಿಸಿಕೊಳ್ಳಬೇಕು. ಅವುಗಳು ನಮ್ಮ ಕೈಗೆ ಸಿಗಲಾರದ ಅಥವಾ ಅಸತ್ಯವಾದ ಅಂಶಗಳಲ್ಲ ಅವೆಲ್ಲವನ್ನು ಬೈಬಲ್ ನಮಗೆ ಬೋಧಿಸಿರುತ್ತದೆ.

ನಮಗೆ ಬಲವಾದ, ಸಂತೋಷವುಳ್ಳ, ಕೈಸ್ತ ಕುಟುಂಬದ ಅವಶ್ಯವಿದ್ದರೆ. ನಾವು (1) ದೇವರ ಸಹಾಯದಿಂದ, ನಮಗೆ ಇಷ್ಟಪಡುವ ಕುಟುಂಬಗಳನ್ನಾಗಿ ಮಾಡಿಕೊಳ್ಳಲು ತ್ವರೆ ಪಡೋಣ. (2) ಬಲವಾದ ಕುಟುಂಬಗಳು ಮಾಡಬೇಕಾದ ಕಾರ್ಯಗಳನ್ನು ಮಾಡಲು ಪ್ರಾರಂಭಿಸೋಣ. ಮತ್ತು (3) ದೇವರನ್ನೇ - ಅವಲಂಬಿತವಾಗಿರ್ರಿ, ಯಾವ ಸಂಬಂಧವಾ ಗಿಯೂ ಚಿಂತೆ ಮಾಡದೆ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞಾತಾಸ್ತುತಿಯನ್ನು ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ (ಫಿಲಿಪ್ಪ 4:6).[18]

---

ಟಿಪ್ಪಣಿಗಳು

[1]This presentation is based on the first half of Royce Money's book *Building Stronger Families* (Wheaton, Ill.: Victor Books, 1984). Used with permission. [2]*ಫಾರ್ ಚೂನ್* ಮ್ಯಾಗಜೈನ್, ಆರ್ಥಿಕ ವಿಷಯಗಳ ಕುರಿತು ಸಮಾಚಾರವನ್ನು ಸಾಹಿತ್ಯ ಲೇಖನವನ್ನು ಪ್ರಕಟಿಸುತ್ತದೆ. "ಫಾಲ್‌ಚೂನ್ 500" ಅಂದರೆ ಅಮೆರಿಕದ "500" ಉನ್ನತವಾಗಿ ಹಣ ಮಾಡುವ ಕಂಪನಿಗಳ ಹೆಸರು. [3]ರಾಯ್ಸಿಮೋನಿ ಅವರು ಅಬಿಲೇನಿ ಕ್ರಿಶ್ಚಿಯನ್ ಯೂನಿವರ್ಸಿಟಿಯ ಈಗಿನ ಅಧ್ಯಕ್ಷರಾಗಿದ್ದಾರೆ. ಅವರು ಈ ಮೊದಲು ACUನಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು ಕುಟುಂಬದ ಬಗ್ಗೆ ಸಲಹೆಗಾರರಾಗಿದ್ದರು ನಾನು ಅವರಲ್ಲಿ ಅನೇಕ ಪ್ರವಚನೆಗಳನ್ನು ಕೇಳಿದ್ದೇನೆ. [4]ಇಲ್ಲಿನ ನಮ್ಮ ಪಾಠದ ಅಧ್ಯಾಯನಗಳನ್ನು ಪ್ರಸಂಗಳನ್ನು ಪಾಶ್ಚಿಮಾತ್ಯ ನಾಗರಿಕರಿಗಾಗಿ ಬರೆಯಲಾಗಿದೆ. ಬೇರೆ ಸಂಸ್ಕೃತದವರಿಗಾಗಿ ಇದನ್ನು ಪರಿವರ್ತಿಸಿಕೊಳ್ಳಬೇಕು. ಒಂದು ವೇಳೆ ಈ ಸಮಸ್ಯೆಯ ನಿಮ್ಮಲ್ಲಿ ಇಲ್ಲದೆ ಹೋದರೂ ಮುಂದೆ ಉದ್ಭವಿಸಬಹುದು. ಪರಿಣಾಮಗಳನ್ನು ಹತೋಟಿಯಲ್ಲಿಡುವದಕ್ಕಾಗಿ ಈ ನಿಯಮಗಳನ್ನು ಬೋಧಿಸಿ. [5]ಹಣ, 15. [6]ಸಂಬಂಧಗಳ ಕುರಿತು ಮತಾಯ್ತ 6:12ರ ಹೊಸ ಒಡಂಬಡಿಕೆಯ ಬೋಧನೆಗಳಗಾಗಿ ಉಪಯೋಗಿಸಬಹುದು. [7]ಕುಟುಂಬದ ಮತ್ತು ಮದುವೆಯ ಕುರಿತಾಗಿ ಅಧ್ಯಾಯನ ಮಾಡಿದ ಅನೇಕ ವ್ಯಕ್ತಿಗಳ ಹೇಳಿಕೆಯನ್ನು ನನ್ನ ಪಾಠದಲ್ಲಿ ಉಪಯೋಗಿಸು ತ್ತೇನೆ. ಇವುಗಳನ್ನು ಉಪಯೋಗಿಸಿ, "ನನ್ನ ಅಧಿಕಾರವನ್ನು" ತೋರಿಸುವದಿಲ್ಲ ಬೈಬಲ್ ಮಾತ್ರ ಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ದೇವರ ವಾಕ್ಯವು ಮಾತ್ರ ಪರಿಪೂರ್ಣವಾದದ್ದು. ಆದರೆ ಸತ್ಯವೇದದ ಸತ್ಯಗಳನ್ನು ಧೃಡಪಡಿಸುವದಕ್ಕಾಗಿ ಮಾತ್ರ ಹೇಳಿಕೆಗಳನ್ನು ಉಪಯೋಗಿಸುತ್ತೇನೆ ಕ್ರೈಸ್ತರ ಹೇಳಿಕೆಗ ಳನ್ನು ಪೌಲನು ತಿಳಿಸುವಾಗ ಅಗ್ರಸ್ಥಾನವನ್ನು ನೀಡಿದ್ದನು (ಅಪೊಸ್ತಲರಕೃತ್ಯಗಳು 17:28; ಕೀರ್ತನೆ 1:12). [8]ಹಣ, 16. [9]ಐಬ್ರಿತ., 18. [10]ಭಾಷಾ ಸಂಪರ್ಕವು ಬಹು ಪ್ರಾಮುಖ್ಯವಾಗಿರುವದರಿಂದ ನನ್ನ ಪ್ರಸಂಗದಲ್ಲಿ ಈ ವಿಷಯವನ್ನು ಅಭಿವೃದ್ಧಿಪಡಿಸಿದ್ದೇನೆ. ಇದರ ಬಗ್ಗೆ ಮಾತನಾಡುವಾಗಲೂ ಈ ಆರು ಸದ್ಗುಣಗಳ ಬಗ್ಗೆ ಬಲವುಳ್ಳ ಕುಟುಂಬಗಳಲ್ಲಿರಬೇಕಾದ ಮುಕ್ತ ಮಾತು ಕಥೆಯ ಕುರಿತು ಬೋಧಿ ಸಿದ್ದೇನೆ.

[11]ನಮ್ಮ ದೇಹದ ಅಂಗಗಳಾದ ನೋಟ, ನಿಲ್ಲುವಿಕೆ, ಹಾವಬಾವಗಳು ಪ್ರಾಯೋಗಿಕವಾದ ಸಂಪರ್ಕವಾಗಿರುತ್ತದೆ. ಬೋಧಕರ ಕಣ್ಣನ್ನು ದಿಟ್ಟಿಸುವುದು, ಮುಂದೆ ಬಾಗಿರುವುದು, ಒಪ್ಪಿದ್ದೇನೆ ಎಂದು ತಲೆಯಾಡಿಸುವುದು ಸಹ ಕ್ರಿಯಾತ್ಮಕ ಸಂಪರ್ಕವಾಗಿರುತ್ತದೆ. [12]ಸಾಮಾನ್ಯವಾಗಿ ಬೆಲೆಯುಳ್ಳ ಸಮಯ, ಹಾಗು ಹೆಚ್ಚು ಸಮಯವನ್ನು ಕಳೆಯುವ ಬಗ್ಗೆ ಕೆಲವರು ಯೋಚಿಸುತ್ತಾರೆ. ಸ್ವಲ್ಪ ಸಮಯವನ್ನು ಮಕ್ಕಳೊಂದಿಗೆ ಕಳೆಯುವ ಸಮಯಕ್ಕೆ "ಬೆಲೆಯುಳ್ಳ ಸಮಯ"ವೆಂದು ಇದು "ಹೆಚ್ಚಿನ" ಸಮಯಕ್ಕಿಂತಲೂ ಬಹು ಪ್ರಾಮುಖ್ಯವಾಗಿದೆ. ಇದರಲ್ಲಿ ಒಂದು ಸತ್ಯವು ಅಡಕವಾಗಿದೆ. ಕೆಲವು

ತಂದೆತಾಯಿಯರು ಹೆಚ್ಚು ಸಮಯವನ್ನು ತಮ್ಮ ಮಕ್ಕಳೊಂದಿಗೆ ಕಳೆಯುವರು ("ಹೆಚ್ಚು ಸಮಯ") ಆದರೆ ಆ ಸಮಯದಲ್ಲಿ ಅವರ ಕಡೆಗೆ ಹೆಚ್ಚು ಗಮನ ನೀಡುವದಿಲ್ಲ "ಬೆಲೆಯುಳ್ಳ" ಸಮಯವನ್ನು ನೀಡಿರಿ. ಆ ಸಮಯದಲ್ಲಿ ಮಗಳಾಗಲೀ, ಮಗನಾಗಲೀ ನಿಮ್ಮಿಂದ ಯಾವುದಾದರೊಂದು ಕಾರ್ಯವನ್ನು ಬಯಸಬಹುದು. ಸಕಾರಾತ್ಮಕವಾದ ವರ್ಚಸ್ಸನ್ನು ನಮ್ಮ ಮಕ್ಕಳ ಮೇಲೆ ಬೀರುವದಕ್ಕೆ ಹೆಚ್ಚು ಸಮಯದ ಅವಶ್ಯವಿದೆ ಮತ್ತು ಅದನ್ನು ಬೆಲೆಯುಳ್ಳ ಸಮಯವನ್ನಾಗಿ ಪರಿವರ್ತಿಸಬೇಕು. ಮುಂದಿನ ಪಾಠಗಳಲ್ಲಿ ಬೋಧಿಸುವಂಥ ಕ್ಷಣಗಳು ಅ ವಿಷಯವನ್ನು ಅಲ್ಪ ಸಮಯದಲ್ಲಿ ತಿಳಿಸಲು ಸಾಧ್ಯವಿಲ್ಲ. ನಮ್ಮ ಮಕ್ಕಳೊಂದಿಗೆ "ಬೆಲೆಯುಳ್ಳ" ಹಾಗು ಹೆಚ್ಚು ಸಮಯವನ್ನು ಕಳೆಯೋಣ - ಅವರ ಕೊರತೆಗಳನ್ನು ನೀಗಿಸಲು ಅವರೊಟ್ಟಿಗೆ ಇರುವುದು. [13]ಇವೆರಡರ ಮೂಲ ಬೋಧನೆಯನ್ನು ಮೋನಿಯವರಿಂದ ತೆಗೆದುಕೊಳ್ಳಲಾಗಿದೆ. [14]ಸ್ವ ಇಚ್ಛೆಯಿಂದಲೂ, ಬೇರೆಬೇರೆಯಾಗಿಯೂ "ಚದರಿರುವ" ಕುಟುಂಬಗಳ ಕುರಿತಾಗಿ ಉಪಯೋಗಿಸಲಾಗಿದೆ. ಕುಟುಂಬದ ಎಲ್ಲಾ ಕಾರ್ಯಗಳನ್ನು ಒಟ್ಟಾಗಿ ಮಾಡಿ, ಪ್ರತ್ಯೇಕತೆಯನ್ನು ತೋರಿ ಸದ ಕುಟುಂಬಗಳಿಗೆ "ಭದ್ರವಾದ" ಕುಟುಂಬ ಎಂಬುದಾಗಿ ಈ ಎರಡು ಅತಿರೇಕದ ವಿಷಯಗಳನ್ನು ಸಮತೋಲನದಲ್ಲಿಟ್ಟುಕೊಳ್ಳಬೇಕು. [15]"ಅಮ್ಮ" ಮತ್ತು ಅಪ್ಪ ಎಂಬ ಸಾಮಾನ್ಯವಾದ ಹೇಳಿಕೆಯನ್ನು ಉಪಯೋಗಿಸುತ್ತೇನೆ. ಪ್ರೀತಿ ಪೂರ್ವಕವಾದ ಹೇಳಿಕೆಗಳನ್ನು ಬೈಬಲಿನಲ್ಲಿ ಉಪಯೋಗಿಸಲಾಗಿದೆ. (ಉದಾಹರಣೆಗೆ "ತಂದೆಯನ್ನು" ಸೂಚಿಸುವದಕ್ಕೆ "ಅಪ್ಪ" ಎಂದು ಹೇಳಲಾಗಿದೆ. [ಮಾರ್ಕ 14:36; ರೋಮಾಪುರ 8:15; ಗಲಾತ್ಯ 4:6]). ನಿಮಗೆ ಸಂಕಟ ನೀಡುವ ಯಾವುದೇ ಹೇಳಿಕೆಯನ್ನು ಹೇಳಿರಿ. ನಿಮ್ಮ ಸಮಾಜದಲ್ಲಿ ಗೌರವಯುತ ಎಂಬುದಾಗಿ ಹೇಳಲ್ಪಡುವ ಹಿತವಾದ ಹೇಳಿಕೆಯನ್ನು ನಿಮ್ಮ ಕೇಳುಗರಿಗೆ ಹೇಳಿರಿ. [16]ಎಫೆಸದವರಿಗೆ 5:25 ಹೇಳುತ್ತದೆ ಸಭೆಗೆ ಕ್ರಿಸ್ತನು ಇಟ್ಟಿರುವ ಪ್ರೀತಿಯನ್ನು ಕುರಿತು; ಅದೇ ವಿಧವಾದ ಪ್ರೀತಿಯನ್ನು ನಮ್ಮ ಕ್ರೈಸ್ತ ಸಹೋದರ - ಸಹೋದರಿಗೆ ತೋರ್ಪಡಿಸಬೇಕು. [17]ಕೆಲವು ಸಾರಿ ಸಲಹೆಗಾರರು ಬಿಕ್ಕಟ್ಟನ್ನು ಎರಡು ಭಾಗವಾಗಿ ಮಾಡಿರುತ್ತಾರೆ. (1) ಮನುಷ್ಯನ ಬೆಳವಣಿಗೆಯ ಕಾಲದಲ್ಲಿ ಉದ್ಭವಿಸುವ ಬಿಕ್ಕಟ್ಟು. ಇದು ಸ್ವಾಭಾವಿಕವಾದ ಜನನ, ಮದುವೆ, ಮರಣದ ಸಮಯದಲ್ಲಿ ಉದ್ಭವಿಸುತ್ತದೆ. (2) ಅಕಸ್ಮಿಕವಾಗಿ ಉಂಟಾಗುವ, ಮತ್ತು ಬಯಸದೆ ಬರುವ ಬಿಕ್ಕಟ್ಟುಗಳು ಗಂಭೀರ ಕಾಯಿಲೆಗಳು, ಕೆಲಸ ಕಳಕೊಳ್ಳುವದು - ಹಾಗು ಅಸ್ವಾಭಾವಿಕ ಮರಣ. [18]ಪ್ರಸಂಗವಾಗಿ ಇದನ್ನು ನೀವು ಉಪಯೋಗಿಸಿದ್ದರೆ ನಿಮ್ಮ ಕೇಳುಗರು ತಮ್ಮ ಕುಟುಂಬಗಳನ್ನು ಸಂತೋಷವಾದ ಹಾಗು ಬಲವುಳ್ಳದ್ದಾಗಿ, ಮಾಡಿಕೊಳ್ಳಲು; ಮೊದಲನೆಯದಾಗಿ ಅವರು ನಂಬಿಗಸ್ತರಾದ ಕ್ರೈಸ್ತರಾಗಿರಬೇಕು. ಸ್ವಪರೀಕ್ಷೆ ಮಾಡಿಕೊಂಡವರಾಗಿ ಪ್ರಾರಂಭಿಸಬೇಕು. ನಾನು ಕುಟುಂಬದಲ್ಲಿ ಏನಾಗಿರಬೇಕೋ, ಅದೇ ಆಗಿರಬೇಕು? ಕ್ರೈಸ್ತರಲ್ಲದವರಿಗೆ ಕ್ರೈಸ್ತರಾಗಲು ಹೇಳಿರಿ (ಗಲ್ಯಾತ 3:26, 27). ಅಪನಂಬಿಗಸ್ತರಾದ ಕ್ರೈಸ್ತರಿಗೆ ಪ್ರತಿಷ್ಟಿಸಿ ಕೊಳ್ಳಲು ಹೇಳಿರಿ (ಅಪೊಸ್ತಲರಕೃತ್ಯ 8:22; ಯಾಕೋಬ 5:16).